

ರಾತ್ರಿ ಊಟದ ಸಮಯ. ರಾಯರ ಕುಟುಂಬ ಮೇಜಿನ ಸುತ್ತಲೂ ಕುಳಿತಿದೆ.

ಸೊಸೆ ಸುಮನಾ ಮಾವನ ತಟ್ಟೆಗೆ 'ಘಂ' ಎನ್ನುವ ಬಿಸಿ ಬಿಸಿ ಸಾರು ಸುರಿಯುತ್ತಿದ್ದಾಳೆ.

ಪುಟ್ಟ ಬಾಯಿ ಬಿಟ್ಟ– 'ಅಜ್ಜಾ, ಸ್ವಲ್ಪ ಕಣ್ಣು ಮುಚ್ಚಿಕೋತಿಯಾ?'

ಅಜ್ಜ ನಕ್ಕರು– 'ಯಾಕೋ?'

'ಮತ್ತೆ, ಅಮ್ಮ ಪಕ್ಕದ್ಮನೆ ಆಂಟಿಗೆ ಹೇಳ್ತಾ ಇದ್ಲು. ಅಜ್ಜ ಒಬ್ರು ಕಣ್ಣು ಮುಚ್‌ಕೊಂಡ್ರೆ ನಮ್ಗೆ ತುಂಬಾ ಆಸ್ತಿ ಸಿಗುತ್ತೆ, ದುಡ್ಡು ಸಿಗುತ್ತೆ ಅಂತ ಅದಕ್ಕೆ.'

ರಾಯರು ಸೊಸೆಯ ಮುಖ ನೋಡಿದರು.

★★★



ತರಲೆ ತಮ್ಮಯ್ಯ ಅಂಗಡಿಗೆ ಬಂದ.

'ಶೆಟ್ರೆ, ಒಳ್ಳೆ ಸೀಗೆಪುಡಿ ಇದ್ಯಾ? ಮತ್ತೆ ಡೆಟಾಲ್ ಸೋಪು?'

'ಎರಡೂ ಇದ್ಯಪ್ಪಾ'

'ಮತ್ತೆ ಬಿಸಿ ನೀರು ಬೇಕಲ್ಲ?'

'ಅದೂ ಸಿಗತ್ತೆ, ಪಕ್ಕದಲ್ಲೇ ಪಾಪಣ್ಣನ ಕ್ಯಾಂಟೀನ್ ಇದೆ.'

ತಮ್ಮಯ್ಯ ಪಾಯಿಂಟಿಗೆ ಬಂದ.

'ಹಾಗಾದ್ರೆ ಬಿಸಿ ನೀರಲ್ಲಿ ಸೀಗೆಪುಡಿ ಹಾಕಿ ಕೈ ತೊಳಕೊಂಡು, ಆ ಮೇಲೆ ಡೆಟಾಲ್ ಸೋಪಲ್ಲಿ ಶುದ್ಧ ಮಾಡ್ಕೊಳ್ಳಿ, ಅದಾದ್ಮೇಲೆ ಹತ್ತು ರೂಪಾಯಿಂದು ಡಾಗ್ ಬಿಸ್ಕತ್ ಕೊಡಿ.'

ಶೆಟ್ರು ತಾಳ್ಮೆಯಿಂದ ಹೇಳಿದರು.

'ಆಯ್ತು.. ಎರಡು ನಿಮಿಷ ನಿಂತ್ಕೊ. ಮತ್ತೆ ಡಾಗ್ ಬಿಸ್ಕತ್ ಕಟ್ಟಿಕೊಡಲೊ ಅಥವಾ ಇಲ್ಲೇ ತಿಂತಿಯೋ?'

★★★

ಆಸ್ಪತ್ರೆಯಲ್ಲಿ ಅಮ್ಮನ ಪಕ್ಕ ಬೆಚ್ಚಗೆ ಮಲಗಿದ್ದ ಪಾಪುವನ್ನು ಕಂಡು ಪುಟ್ಟ ಆಶ್ಚರ್ಯದಿಂದ ಕೇಳಿದ.

'ಪಾಪು ಹೇಗ್ಬಂತು ಮಮ್ಮಿ?'

ಮೇರಿ, ಪುಟ್ಟನ ತಲೆ ನೇವರಿಸುತ್ತಾ ನಕ್ಕಳು.

'ಮೊದಲು ತಲೆ ಬಂತು, ಆಮೇಲೆ ಕೈ ಬಂತು, ಕೊನೆಗೆ ಕಾಲು ಬಂತು.'

ಕಕ್ಕಾಬಿಕ್ಕಿಯಾದ ಪುಟ್ಟ ಮರು ಪ್ರಶ್ನೆ ಮಾಡಿದ.

'ಹೌದಾ ಮಮ್ಮಿ? ಹಾಗಾದ್ರೆ ನೀನು ಅದನ್ನೆಲ್ಲಾ ಹೇಗೆ ಅಂಟಿಸಿದಿ?'

★★★

ಪುಟ್ಟ ಎಲ್‌ಕೆಜಿ ಬಟರ್ ಫ್ಲೈ ತಪಾಸಣೆಗೆ ಬಂದ ಅಧ್ಯಕ್ಷರು ಮಕ್ಕಳನ್ನು ಕೇಳಿದರು.

'ಪುಟಾಣಿಗಳು ನಿಮಗೆ ಸ್ಕೂಲ್ ಇಷ್ಟಾನೋ, ಮನೇನೊ?'

ಮಕ್ಕಳು ಕೋರಸ್‌ನಲ್ಲಿ ಕಿರುಚಿದವು 'ಸ್ಕೂಲ್ ಇಷ್ಟ?'

ಮಂಕಾಗಿದ್ದ ಮಿಸ್ ಮಾಲಾಳ ಮುಖ ಅರಳಿದ ಕಮಲವಾಯಿತು.

ಅಧ್ಯಕ್ಷರು ಪುನಃ ಪ್ರಶ್ನೆ ಮಾಡಿದರು.

'ಪುಟ್ಟಾ, ನಿಂಗೆ ಸ್ಕೂಲ್ ಯಾಕಿಷ್ಟ?'

'ಅಂಕಲ್, ನಂಗೆ ಸ್ಕೂಲ್ ಯಾಕಿಷ್ಟ ಅಂದ್ರೆ– ಮನೇಲಿ ನಾನು ಗಲಾಟೆ ಮಾಡಿದ್ರೆ, ಚೇಷ್ಟೆ ಮಾಡಿದ್ರೆ ಅಮ್ಮ ಬೈತಾಳೆ, ಅಪ್ಪ ಹೊಡಿತಾರೆ. ಸುಮ್ನೇನೇ ಇರಬೇಕು, ಇಲ್ಲಾದ್ರೆ ಎಷ್ಟು ಬೇಕಾದ್ರೂ ಗಲಾಟೆ ಮಾಡಬಹುದು, ದಾಂದಲೆ ಮಾಡಬಹುದು, ಫೈಟ್ ಮಾಡಬಹುದು. ಮಿಸ್ ಏನೂ ಮಾಡಲ್ಲ. ಯಾಕೇಂದ್ರೆ ಅವ್ರು ಛೇರ್ ಮೇಲೆ ನಿದ್ರೆ ಮಾಡ್ತಾನೇ ಇರ್‍ತಾರಲ್ಲ! ಅದಕ್ಕೆ ಅರಳಿದ ಕಮಲ ಮುದುಡಿತು.

★★★

ಗೃಹಿಣಿ: ಏನೋ ರಮೇಶ್, ನಿಮ್ಮಮ್ಮ ಅಕ್ಕನ ಬಾಣಂತನಕ್ಕೆ ಇನ್ನೂ ಯುಎಸ್‌ಗೆ ಹೋಗಿಲ್ಲ. ವೀಸಾ ಸಿಕ್ಕಿಲ್ವಾ?

ರಮೇಶ್: ವೀಸಾ, ಪಾಸ್‌ಪೋರ್ಟ್, ಏರ್ ಟಿಕೆಟ್ ಎಲ್ಲಾ ಸಿಕ್ಕಿದೆ ಆಂಟಿ. ಆದ್ರೆ ಅಮ್ಮ ಸೈಜಿನ ಜೀನ್ಸ್ ಪ್ಯಾಂಟ್ ಸಿಕ್ಕಿಲ್ಲ. ನಾಳೆ ಗೋಲ್–ಮಾಲ್ ನಲ್ಲಿ ತಲಾಷ್ ಮಾಡ್ಬೇಕು.

ಸಂಗ್ರಹ: ಎನ್.ಎಸ್.ರಘುನಂದನ್, ಬೆಂಗಳೂರು




